ಉಂಡು ಎದ್ದ.

ಮತ್ತೆ ಮೆಲ್ಲಗೆ, 'ನಾನು ಸ್ವಲ್ಪ ಹೊರಗೆ ಹೋಗಿ ಬರುತ್ತೇನೆ' ಎಂದ.

ಖಾನ್ ಸಾಹೇಬರು ತಟ್ಟನೆ ಅಂದರು, 'ನೀನು ಹೊರಗೆ ಹೋಗಕೂಡದು. ಹೋಗುವುದಿದ್ದರೆ ನಾಳೆ 10 ಗಂಟೆಯ ನಂತರ ಮಾತ್ರ.'

ಅಬ್ದುಲ್ಲಾ ಸುಮ್ಮನಾದ. ಕೈ ತೊಳೆದು ಬಂದು ಅವನಿಗಾಗಿ ತೆರವು ಮಾಡಿಡಲ್ಪಟ್ಟಿದ್ದ ಕೋಣೆಯ ಮಂಚದ ಮೇಲೆ ಮಲಗಿದ. ಸಲ್ಮಾಳ ಸುಳಿವಿರಲಿಲ್ಲ. ಮೆತ್ತನೆಯ ಮಂಚದ ಪ್ರಭಾವದಿಂದ ಸ್ವಲ್ಪ ಹೊತ್ತಿನಲ್ಲಿಯೇ ನಿದ್ದೆ ಆವರಿಸಿತು.

★★★

ಎಚ್ಚರವಾದಾಗ ಸಂಜೆಯಾಗಿತ್ತು. ಟೀಪಾಯಿಯ ಮೇಲೆ ಯಾರೋ ಇಟ್ಟುಹೋಗಿದ್ದ ಚಾ ತಣ್ಣಗಾಗಿತ್ತು.

ನಾಳೆ ಬೆಳಿಗ್ಗೆ 10 ಗಂಟೆಯವರೆಗೆ ಹೇಗಪ್ಪಾ ಸಮಯ ಕಳೆಯುವುದು? ಸಲ್ಮಾಳಾದ್ರೂ ಮಾತಾಡ್ತಾ, ವಾದಮಾಡುತ್ತ, ಜಗಳಾಡ್ತಾ ಇದ್ದಿದ್ದರೆ ಚೆನ್ನಾಗಿತ್ತು, ಎಂದುಕೊಂಡ.

ಸಲ್ಮಾಳನ್ನು ಕರೆದರೆ ಹೇಗೆ? ಹೇಗೂ ಈವತ್ತೊಂದು ದಿನಕ್ಕೆ ನಾನವಳ ಗಂಡ. ನಾನು ಹೇಳಿದ ಹಾಗೆ ಅವಳು ಕೇಳಬೇಕು. ಬಂದು ಇಲ್ಲಿ ಕೂತ್ಕೋ ಅಂತ ಜೋರು ಮಾಡಿದರೆ!

ಊಹೂಂ... ಹಾಗೆ ಮಾಡಲು ಮನಸ್ಸೊಪ್ಪದು.

ಸಿಗರೇಟಾದರೂ ಎಳೆಯುವ ಎಂದರೆ ಅಭ್ಯಾಸ ಇರಲಿಲ್ಲ.

ಬಾತ್‌ರೂಮಿಗೆ ಹೋಗಿ ಕೈಕಾಲು ತೊಳೆದು ಬಂದ.

ಕಪ್ಪೆಗಳು ಹೊರಗೆ ಇನ್ನೂ ವಟಗುಟ್ಟುತ್ತಿದ್ದವು.

ನೀರಸ ಕ್ಷಣಗಳು ಒಂದರ ಹಿಂದೊಂದರಂತೆ ಉರುಳಿಹೋದವು.

ರಾತ್ರಿಯ ಊಟವೂ ಮುಗಿಯಿತು. ಮಂಚದ ಮೇಲೆ ಬಂದು ಮಲಗಿದ. ನಿದ್ದೆ ಬಾರದೆ ಕಿಟಕಿಯ ಮೂಲಕ ಕಾಣುವ ಆಕಾಶದ ನಕ್ಷತ್ರಗಳನ್ನೇ ನೋಡುತ್ತಾ ಇದ್ದ.

ಸ್ವಲ್ಪ ಹೊತ್ತಿನಲ್ಲಿ ಕಾಲ ಸಪ್ಪಳ. ಯಾರೋ ಇತ್ತ ಬರುತ್ತಿರಬೇಕೆಂದುಕೊಂಡ.

ಖಾನ್ ಸಾಹೇಬರ ಧ್ವನಿ ಕೇಳಿಬಂತು.

'ತುಂಬಾ ಜಾಗರೂಕಳಾಗಿರು ಮಗಳೆ. ಸಂಯಮ ಇರಲಿ.'

ಸಲ್ಮಾ ಬಾಗಿಲಲ್ಲಿ ಕ್ಷಣಕಾಲ ನಿಂತು ಒಳಗೆ ಬಂದಳು. ಬಾಗಿಲು ಹಾಕಿ ಕದವಿಕ್ಕಿ ಮಂಚದ ಕಡೆ ಬಂದಳು.

'ಅಪ್ಪನಿಗೇನು ಗೊತ್ತು ಆ ಮನೆಯಲ್ಲಿ ಕಳೆದ ಒಂದು ವರ್ಷ ನನ್ನ ಸಂಯಮವೆಷ್ಟು ಬಲಿಷ್ಠ ಆಗಿತ್ತೆಂಬುದು. ಆತ್ಮಹತ್ಯೆ ಹೇಡಿತನವೆಂದು ನಾನು ಗಟ್ಟಿಮಾಡಿಕೊಂಡಿದ್ದರಿಂದ ಮಾತ್ರ ಅವನ ಈ ಆಟಕ್ಕೆಲ್ಲಾ ನಾನು ಬಾಗುತ್ತಿದ್ದೇನೆ. ಇಲ್ಲವಾಗಿದ್ದರೆ...'

ಸಲ್ಮಾ ಒಗಟಾಗುತ್ತಾ ಹೋದಳು. ಅಬ್ದುಲ್ಲಾ ಮುಳ್ಳಿನ ಮೇಲೆ ಮಲಗಿದಂತೆ ಚಡಪಡಿಸಿದ. ಎದ್ದು ಕುಳಿತ. ಸಲ್ಮಾ ಸ್ವಲ್ಪ ದೂರದಲ್ಲಿ ಮಂಚದ ಮೇಲೆ ಕುಳಿತಳು. ಅವನನ್ನು ನೋಡುತ್ತಾ ಹೇಳಿದಳು,

'ಇಂದು ನೀನು ನನ್ನ ಗಂಡ. ನಾನು ನಿನ್ನ ಹೆಂಡತಿ. ನೀನು ಕೂಡ ಪಕ್ಕಾ ಗಂಡಸು ತಾನೇ. ಅಪ್ಪಣೆ ಮಾಡು ಈ ನಿಕೃಷ್ಟ ದಾಸಿ ಏನು ಮಾಡಬೇಕಂತ...'

ಅಬ್ದುಲ್ಲಾ ಈಗ ನಿಷ್ಠುರನಾದ, ಗಡುಸಾದ.

'ಸಲ್ಮಾ... ಮಾತು ಮಾತಿಗೂ ನೀನು ಜಿಗುಟಾಗುತ್ತಾ ಹೋಗುತ್ತಿಯೇ, ಒರಟಾಗುತ್ತಿಯೇ,